ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1069 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ, (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 18/12/2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರ ನೈಸ್ ಯೋಜನೆ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿದೆಯೇ; ಹಾಗಿದ್ದಲ್ಲಿ, ಈ ಉಪ ಸಮಿತಿಯ ಸದಸ್ಯರನ್ನು ಮತ್ತು ಇದರ ಕಾರ್ಯವ್ಯಾಪ್ತಿ ಏನು; (ಪೂರ್ಣ ಮಾಹಿತಿ ನೀಡುವುದು) | ನೈಸ್ ಯೋಜನೆ ಬಗ್ಗೆ ಇರುವ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಮೊದಲನೇ ಸಚಿವ ಸಂಪುಟ ಉಪ ಸಮಿತಿಯನ್ನು ದಿನಾಂಕ:18.02.2020 ರಂದು ರಚಿಸಲಾಗಿದ್ದು(ಅನುಬಂಧ-1), ಸದರಿ ಉಪ ಸಮಿತಿಯು ದಿನಾಂಕ:19.03.2020 ರಂದು ಸಭೆಯನ್ನು ನಡೆಸಿರುತ್ತದೆ(ಸದರಿ ಸಭೆಯ ನಡವಳಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ).<br><br>ನಂತರ ಎರಡನೇ ಸಚಿವ ಸಂಪುಟ ಉಪ ಸಮಿತಿಯನ್ನು ದಿನಾಂಕ:04.12.2020 ರಂದು ರಚಿಸಲಾಗಿದ್ದು(ಅನುಬಂಧ-3), ಎರಡನೇ ಉಪ ಸಮಿತಿಯು ದಿನಾಂಕ:12.03.2021 ರಂದು ಸಭೆಯನ್ನು ನಡೆಸಿರುತ್ತದೆ(ಸದರಿ ಸಭೆಯ ನಡವಳಿಯನ್ನು ಅನುಬಂಧ-4 ರಲ್ಲಿ ಲಗತ್ತಿಸಿದೆ).<br><br>ಮುಂದುವರೆದು, ಮೂರನೇ ಸಚಿವ ಸಂಪುಟ ಉಪ ಸಮಿತಿಯನ್ನು ದಿನಾಂಕ:05.10.2021 ರಂದು ರಚಿಸಲಾಗಿದ್ದು(ಅನುಬಂಧ-5), ಸದರಿ ಉಪ ಸಮಿತಿಯು ದಿನಾಂಕ:14.02.2022, ದಿನಾಂಕ:25.04.2022 ಮತ್ತು ದಿನಾಂಕ:27.03.2023 ಗಳಂದು ಸಭೆಗಳನ್ನು ನಡೆಸಿರುತ್ತದೆ(ಸದರಿ ಸಭೆಗಳ ನಡವಳಿಗಳನ್ನು ಅನುಬಂಧ-6 ರಲ್ಲಿ ಲಗತ್ತಿಸಿದೆ). |
| ಆ) | ಈ ಉಪ ಸಮಿತಿಯು ಇದುವರೆಗೆ ಎಷ್ಟು ಸಭೆಗಳನ್ನು ನಡೆಸಿದೆ; ಮತ್ತು ಈ ಉಪ ಸಮಿತಿ ಸಭೆಯಲ್ಲಿ ಕೈಗೊಂಡಿರುವ ತೀರ್ಮಾನಗಳಾವುವು; (ಉಪಸಮಿತಿ ತೀರ್ಮಾನಗಳು ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು) | |
| ಇ) | ರಾಜ್ಯ ಸರ್ಕಾರ ಸಚಿವ ಸಂಪುಟದ ತೀರ್ಮಾನಗಳನ್ನು ಅನುಷ್ಠಾನಗೊಳಿಸಲು ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಸಚಿವ ಸಂಪುಟದ ನಿರ್ಣಯದಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಅದರಂತೆ ಪ್ರಸ್ತುತ 41 ಕಿ.ಮೀ ಫೆರಿಫೆರಲ್ ರಸ್ತೆ, 8.1 ಕಿ.ಮೀ ಲಿಂಕ್ ರಸ್ತೆ ಮತ್ತು 5 ಕಿ.ಮೀ ವೇಗದ ಹೆದ್ದಾರಿಯನ್ನು ನಿರ್ಮಿಸಲಾಗಿರುತ್ತದೆ. |
| ಈ) | ರಾಜ್ಯ ಸರ್ಕಾರ ಇತ್ತೀಚೆಗೆ ಬೆಂಗಳೂರು-ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗೆ ಭೂಸ್ವಾಧೀನಪಡಿಸಿಕೊಳ್ಳಲು ಹೊರಡಿಸಿದ್ದ | ಬೆಂಗಳೂರು-ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗೆ ಭೂಸ್ವಾಧೀನಪಡಿಸಿಕೊಳ್ಳಲು ಹೊರಡಿಸಿದ್ದ ನೋಟಿಫಿಕೇಷನ್ ಹಿಂತೆಗೆದುಕೊಳ್ಳುವ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ. |

| | | |
|---|---|---|
| | ನೋಟಿಫಿಕೇಷನ್ ಹಿಂತೆಗೆದುಕೊಳ್ಳಲು ನಿರ್ಧರಿಸಿರುವುದೇ; ಹಾಗಿದ್ದಲ್ಲಿ, ಈ ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನಿನ ವಿಸ್ತೀರ್ಣ ಭೂಸ್ವಾಧೀನಪಡಿಸಿಕೊಳ್ಳಲು ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭ ಮಾಡಿರುವ ವಿಸ್ತೀರ್ಣ, ಈಗಾಗಲೇ ಸ್ವಾಧೀನಪಡಿಸಿಕೊಂಡ ಯೋಜನೆ ಪ್ರವರ್ತಕರಿಗೆ ಹಸ್ತಾಂತರಸಿರುವ ವಿಸ್ತೀರ್ಣ, ಸರ್ಕಾರದ ವಶದಲ್ಲಿರುವ ವಿಸ್ತೀರ್ಣ ಹಾಗೂ ಭೂಸ್ವಾಧೀನ ಕೈಬಿಡಲು ಉದ್ದೇಶಿಸಿರುವ ವಿಸ್ತೀರ್ಣ ಎಷ್ಟು? (ಗ್ರಾಮವಾರು ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು) | • ಬೆಂಗಳೂರು-ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ ಅನುಷ್ಠಾನಕ್ಕಾಗಿ ಇಲ್ಲಿಯವರೆವಿಗೂ ಒಟ್ಟು 18056 ಎಕರೆ ಜಮೀನಿಗೆ ಕೆ.ಐ.ಎ.ಡಿ ಕಾಯ್ದೆ ಕಲಂ 28(1) ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>• ಈ ಪೈಕಿ 4809 ಎಕರೆ ಜಮೀನಿಗೆ ಕೆ.ಐ.ಎ.ಡಿ ಕಾಯ್ದೆ ಕಲಂ28(4) ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.<br>• ಕಲಂ 28(4) ರಂತೆ ಅಂತಿಮ ಅಧಿಸೂಚನೆ ಹೊರಡಿಸಿರುವ ಜಮೀನಿನ ಪೈಕಿ 2191 ಎಕರೆ 25.81 ಗುಂಟೆ ಖಾಸಗಿ ಜಮೀನನ್ನು ಮತ್ತು 5000 ಎಕರೆ ಸರ್ಕಾರಿ ಜಮೀನನ್ನು ಯೋಜನೆ ಅನುಷ್ಠಾನಕ್ಕಾಗಿ ಹಸ್ತಾಂತರಿಸಲಾಗಿದೆ. (ಅನುಬಂಧ-7 ಮತ್ತು ಅನುಬಂಧ-8 ರಲ್ಲಿ ಲಗತ್ತಿಸಿದೆ)<br>• ಸರ್ಕಾರದ ವಶದಲ್ಲಿ 28(4) ರಂತೆ 4809 ಎಕರೆ ಜಮೀನಿನಲ್ಲಿ ಹಸ್ತಾಂತರಿಸಿರುವ 2191 ಎಕರೆ ಹೊರತುಪಡಿಸಿ 2618 ಎಕರೆ ಜಮೀನು ಇರುತ್ತದೆ. (ಅನುಬಂಧ-9 ರಲ್ಲಿ ಲಗತ್ತಿಸಿದೆ)<br>• ಪ್ರಸ್ತುತ ಭೂಸ್ವಾಧೀನ ಕೈಬಿಡುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ:ಲೋಇ 756 ಸಿಆರ್‌ಎಂ 2024

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಅನುಬಂಧ - 1

1192106
26/2/2020

ಕರ್ನಾಟಕ ಸರ್ಕಾರ

ಸಂಖ್ಯೆ: ಸಸಂಶಾ 12 ಸಿಎಸ್‌ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 18.02.2020.

24/02/2020

## ಅಧಿಕೃತ ಜ್ಞಾಪನ

ವಿಷಯ: NICE (ನೈಸ್) ಯೋಜನೆಯಡಿ ಬರುವ ಜಮೀನುಗಳ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸಚಿವ ಸಂಪುಟದ ಉಪಸಮಿತಿಯನ್ನು ರಚಿಸುವ ಬಗ್ಗೆ.

ಉಲ್ಲೇಖ: ದಿನಾಂಕ 17.02.2020ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯ (ಸಚಿವ ಸಂಪುಟ ಪ್ರಕರಣ ಸಂಖ್ಯೆ: ಸಿ.108/2020)).

--=--=--

NICE (ನೈಸ್) ಯೋಜನೆಯಡಿ ಬರುವ ಜಮೀನುಗಳ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಪರಿಶೀಲಿಸಿ, ಸಚಿವ ಸಂಪುಟಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವ ಸಲುವಾಗಿ ಈ ಕೆಳಕಂಡ ಸಚಿವರುಗಳನ್ನೊಳಗೊಂಡ ಸಚಿವ ಸಂಪುಟದ ಉಪಸಮಿತಿಯನ್ನು ರಚಿಸಲಾಗಿದೆ:

| | | |
|---|---|---|
| 1 | ಶ್ರೀ ಗೋವಿಂದ ಎಂ. ಕಾರಜೋಳ,<br>ಮಾನ್ಯ ಉಪ ಮುಖ್ಯಮಂತ್ರಿ<br>(ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ) | ಅಧ್ಯಕ್ಷರು |
| 2 | ಶ್ರೀ ಡಾ॥ ಅಶ್ವತ್ಥ್ ನಾರಾಯಣ್ ಸಿ.ಎನ್.<br>ಮಾನ್ಯ ಉಪ ಮುಖ್ಯಮಂತ್ರಿ<br>(ಉನ್ನತ ಶಿಕ್ಷಣ, ಐಟಿ, ಬಿಟಿ ಮತ್ತು ಕೌಶಲ್ಯಾಭಿವೃದ್ಧಿ) | ಸದಸ್ಯರು |
| 3 | ಶ್ರೀ ಆರ್. ಅಶೋಕ್,<br>ಮಾನ್ಯ ಕಂದಾಯ ಸಚಿವರು | ಸದಸ್ಯರು |
| 4 | ಶ್ರೀ ಬಸವರಾಜ ಬೊಮ್ಮಾಯಿ,<br>ಮಾನ್ಯ ಗೃಹ ಸಚಿವರು | ಸದಸ್ಯರು |
| 5 | ಶ್ರೀ ಜೆ.ಸಿ.ಮಾಧುಸ್ವಾಮಿ,<br>ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು | ಸದಸ್ಯರು |
| 6 | ಶ್ರೀ ಎಸ್.ಟಿ. ಸೋಮಶೇಖರ್,<br>ಮಾನ್ಯ ಸಹಕಾರ ಸಚಿವರು | ಸದಸ್ಯರು |

20/2
AS)

Secy, PWD

ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 13(5) ಹಾಗೂ ಸುತ್ತೋಲೆ ಸಂಖ್ಯೆ: ಡಿಸಿಎ (ಎಂ). 98/2001 ದಿನಾಂಕ: 29.3.2001ರ ಪ್ರಕಾರ **ಲೋಕೋಪಯೋಗಿ ಇಲಾಖೆಯು** ಈ ಸಚಿವ ಸಂಪುಟ ಉಪಸಮಿತಿಗೆ ಅಗತ್ಯ ನೆರವು ನೀಡುವುದು.

(ಆರ್. ಚಂದ್ರಶೇಖರ್)
ಸರ್ಕಾರದ ಉಪ ಕಾರ್ಯದರ್ಶಿ
(ಸಚಿವ ಸಂಪುಟ)

ಇವರಿಗೆ:

1. ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ).

....2

2. ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ, ಬಿಟಿ ಮತ್ತು ಕೌಶಲ್ಯಾಭಿವೃದ್ಧಿ).
3. ಮಾನ್ಯ ಕಂದಾಯ ಸಚಿವರು.
4. ಮಾನ್ಯ ಗೃಹ ಸಚಿವರು.
5. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು.
6. ಮಾನ್ಯ ಸಹಕಾರ ಸಚಿವರು.
7. ಸರ್ಕಾರದ ಮುಖ್ಯ ಕಾರ್ಯದರ್ಶಿ.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ
11. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪ್ರತಿ:

1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ.
2. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿ.

ಅನುಬಂಧ-2

ಲೋಇ 206 ಸಿಆರ್‌ಎಂ 2020

**ಬೆಂಗಳೂರು-ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆಯಡಿ ಬರುವ ಜಮೀನುಗಳ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಪರಿಶೀಲಿಸಲು ರಚಿಸಲಾದ ಸಚಿವ ಸಂಪುಟ ಉಪ ಸಮಿತಿಯ ದಿನಾಂಕ:19.03.2020ರ ಸಭೆಯ ನಡವಳಿಗಳು**

ಸಭೆಯ ಆರಂಭದಲ್ಲಿ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ರವರು ಸಚಿವ ಸಂಪುಟ ಉಪ ಸಮಿತಿಯ ಅಧ್ಯಕ್ಷರಾದ ಶ್ರೀ ಗೋವಿಂದ ಎಂ ಕಾರಜೋಳ, ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ) ಹಾಗೂ ಇತರೆ ಸಚಿವರನ್ನು ಹಾಗೂ ಸಭೆಯಲ್ಲಿ ಭಾಗವಹಿಸಿದ್ದ ಹಿರಿಯ ಅಧಿಕಾರಿಗಳನ್ನು ಸ್ವಾಗತಿಸಿದರು.

ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರು ಬೆಂಗಳೂರು-ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆಯ ಸಂಕ್ಷಿಪ್ತ ವಿವರಗಳನ್ನು, Express Way, Peripheral Road, Link Road, Township ಗಳ ಮಾಹಿತಿ ಇವುಗಳಿಗೆ ಯೋಜನೆ ಪಿಪಿಆರ್‌ನಲ್ಲಿ ನಿಗಧಿಪಡಿಸಲಾದ ಭೂಮಿಯ ಅಂಕಿ ಅಂಶಗಳ ವಿವರಗಳನ್ನು ನೀಡಿದರು.

ಅಪರ ಮುಖ್ಯ ಕಾರ್ಯದರ್ಶಿಗಳು ಲೋಕೋಪಯೋಗಿ ಇಲಾಖೆ ರವರು ಮಾತನಾಡುತ್ತ ಈ ಯೋಜನೆಯ ಅನುಷ್ಠಾನಕ್ಕಾಗಿ FWA ಅಡಿಯಲ್ಲಿ ಅಂತರ್ ಇಲಾಖೆಗಳ ಸಮನ್ವಯ ಕಾರ್ಯಕ್ಕಾಗಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಈ ಯೋಜನೆಯ ಅನುಷ್ಠಾನದಲ್ಲಿ ಉಂಟಾದ ಪ್ರಮುಖ ಕಾನೂನು ವ್ಯಾಜ್ಯಗಳಾದ ಶ್ರೀ ಹೆಚ್.ಟಿ.ಸೋಮಶೇಖರ್ ರೆಡ್ಡಿ ಪ್ರಕರಣ, ಎ.ಐ.ಎಂ.ಓ. ಪ್ರಕರಣಗಳಲ್ಲಿ ಮಾನ್ಯ ಉಚ್ಛ ನ್ಯಾಯಾಲಯ ಮತ್ತು ಸರ್ವೋಚ್ಛ ನ್ಯಾಯಾಲಯಗಳು ನೀಡಿದ ತೀರ್ಪಿನ ಸಂಕ್ಷಿಪ್ತ ವಿವರಗಳನ್ನು ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಇವರು ಸಭೆಗೆ ವಿವರಿಸಿದರು.

ಈ ಸಮಯದಲ್ಲಿ ಶ್ರೀ ಜೆ.ಸಿ.ಮಾಧುಸ್ವಾಮಿ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಮಾತನಾಡಿ ಈ ಎಲ್ಲಾ ವಿಷಯಗಳು ಸಭೆಯಲ್ಲಿರುವ ಬಹುತೇಕ ಸಚಿವರ ಗಮನದಲ್ಲಿವೆ. ಯೋಜನೆಯು ಕಾನೂನು ವ್ಯಾಜ್ಯದಲ್ಲಿ ಸಿಲುಕಿ ಪೂರ್ಣಗೊಳ್ಳದೆ ಇರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಸಚಿವ ಸಂಪುಟದ ಉಪ ಸಮಿತಿಯ ರಚನೆಯ ಉದ್ದೇಶವೇ ಈ ಯೋಜನೆಯ ಅನುಷ್ಠಾನದಲ್ಲಿ ಬೇಕಾಗಿರುವ ಜಮೀನುಗಳಲ್ಲಿ ಉಂಟಾದ ವ್ಯಾಜ್ಯಗಳ ಕುರಿತು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡುವುದಾಗಿದೆ. ಈ ಹಿನ್ನಲೆಯಲ್ಲಿ ಈ ಸಭೆಯಲ್ಲಿ ಚರ್ಚಿಸೋಣವೆಂದು ತಿಳಿಸಿದರು.

ಮುಂದುವರೆದು ಈ ಯೋಜನೆಯಡಿ ಸ್ವಾಧೀನಪಡಿಸಿಕೊಳ್ಳಲಾದ ಹೆಚ್ಚುವರಿ ಜಮೀನಿನ ಕುರಿತು ಏನು ಮಾಡಬೇಕು, ಭೂಸ್ವಾಧೀನ ಪ್ರಕ್ರಿಯೆಯನ್ನು ಕೆ.ಐ.ಎ.ಡಿ.ಬಿ. ಸಂಸ್ಥೆಯಿಂದ ಮಾಡಲಾಗುತ್ತಿದ್ದು, ಕೆ.ಐ.ಎ.ಡಿ.ಬಿ ಕಾನೂನಿನ್ವಯ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಘಟ್ಟದಲ್ಲಿರುವ ಜಮೀನುಗಳನ್ನು ಯಾವ ರೀತಿ ಸ್ವಾಧೀನಪಡಿಸಿಕೊಳ್ಳಬೇಕು, ಬಿ.ಎಂ.ಐ.ಸಿ.ಪಿ. ಯೋಜನೆಗೆ ಅವಶ್ಯವಿಲ್ಲದ ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಘಟ್ಟದಲ್ಲಿರುವ ಸುಮಾರು 250 ಎಕರೆ ಜಮೀನಿನ ಕುರಿತು ಯಾವ ನಿಲುವು ತೆಗೆದುಕೊಳ್ಳಬೇಕು. ಈ ಎಲ್ಲಾ ಅಂಶಗಳ ಕುರಿತು ಪರಿಶೀಲಿಸಬೇಕಾಗುತ್ತದೆ ಎಂದು ತಿಳಿಸಿದರು.

ಅಲ್ಲದೆ, ವಿವಿಧ ನ್ಯಾಯಾಲಯಗಳಲ್ಲಿ ಅಂದರೆ ಉಚ್ಚ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯದಲ್ಲಿ ಅನೇಕ ಪ್ರಕರಣಗಳಿದ್ದು ವಿವಿಧ ಇಲಾಖೆಗಳಾದ ಲೋಕೋಪಯೋಗಿ ಇಲಾಖೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ನಗರಾಭಿವೃದ್ಧಿ ಇಲಾಖೆ ಹಾಗೂ ಬಿ.ಎಂ.ಐ.ಸಿ.ಪಿ. ಪ್ರಕರಣವನ್ನು ನಡೆಸುತ್ತಿದ್ದು, ಈ ಎಲ್ಲಾ ವ್ಯಾಜ್ಯಗಳ ಅಂತರ್ ಇಲಾಖೆಯಲ್ಲಿದ್ದು, ಇವುಗಳನ್ನು ಸಮನ್ವಯಗೊಳಿಸುವ ಹಿನ್ನೆಲೆಯಲ್ಲಿ ಶ್ರೀ ಜಗದೀಶ್ ಹೆಚ್ಚುವರಿ ಕಾರ್ಯದರ್ಶಿ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ರವರನ್ನು ಸಮನ್ವಯ ಅಧಿಕಾರಿಯನ್ನಾಗಿ ನೇಮಿಸಲು ಸೂಚಿಸಿದರು.

ಮಾನ್ಯ ಕಾನೂನು, ಸಂಸದೀಯ ವ್ಯಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಬಿ.ಎಂ.ಐ.ಸಿ.ಪಿ ಯೋಜನೆಯ ಕಾನೂನು ಸಲಹೆಗಾರರಾದ ಕು: ಶೃತಿ ಚೆಗಂತಿ ರವರನ್ನು ಈಗ ತುರ್ತಾಗಿರುವ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡುವಂತೆ ಕೋರಿದರು.

ಕು: ಶೃತಿ ಚೆಗಂತಿ, ವಿಶೇಷ ವಕೀಲರು, ಬಿ.ಎಂ.ಐ.ಸಿ.ಪಿ ರವರು ಈ ಕೆಳಗಿನ ನಾಲ್ಕು ಅಂಶಗಳಿಗೆ ತುರ್ತಾಗಿ ಸರ್ಕಾರದ ನಿರ್ದೇಶನ ನೀಡಬೇಕಾಗಿದೆ ಎಂದು ವಿವರಿಸಿದರು.

1. To consider issues pertaining to lands under 3 (1), 28 (1), 28 (4) notifications for Peripheral Road and Link road.
2. To consider issues relating to (a) non concretization of Toll Road and (b) Unauthorized enhancement of Toll.
3. To consider issues relating to 250 acres of land not required for BMICP.
4. To consider initiating process for revision of ODP.

ಈ ಸಮಯದಲ್ಲಿ ಶ್ರೀ ಆರ್.ಅಶೋಕ್ ಮಾನ್ಯ ಕಂದಾಯ ಸಚಿವರು ಮತು ಶ್ರೀ ಎಸ್.ಟಿ.ಸೋಮಶೇಖರ್ ಮಾನ್ಯ ಸಹಕಾರ ಸಚಿವರು ರವರು, ನೈಸ್ ಕಂಪನಿಯು ಅನಧಿಕೃತವಾಗಿ ರಸ್ತೆ ಶುಲ್ಕವನ್ನು ಸಂಗ್ರಹಿಸುತ್ತಿದ್ದಾರೆ. ಅಲ್ಲದೆ ರಸ್ತೆ ಶುಲ್ಕವನ್ನು ಮನಸ್ಸಿಗೆ ಬಂದಂತೆ ಏರಿಸಲಾಗುತ್ತಿದೆ ಇದಕ್ಕೆ ಈ ಹಿಂದೆ ಸರ್ಕಾರವೇನಾದರೂ ಶುಲ್ಕ ಏರಿಸಲು ಅನುಮತಿ ನೀಡಿದೆಯೇ ಎಂದು ಪ್ರಶ್ನಿಸಿದರು.

ಕಾರ್ಯದರ್ಶಿಗಳು, ಲೋಇ. ರವರು ಸಂಕ್ಷಿಪ್ತವಾಗಿ ಟೋಲ್ ಶುಲ್ಕದ ಕುರಿತು ಸಭೆಗೆ ವಿವರಿಸಿದರು. ದಿನಾಂಕ:04.06.2002ರಲ್ಲಿ ನೈಸ್ ಕಂಪನಿಯ 2 ಲೇನ್ ಬಿಟುಮಿನ ರಸ್ತೆಯನ್ನು 24 ತಿಂಗಳಲ್ಲಿ ಪೂರ್ಣಗೊಳಿಸಿ, ತದನಂತರ 4 ಲೇನ್ ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸುವುದಾಗಿ ತಿಳಿಸಿ, ಅನುಮತಿ ಕೋರಿತ್ತು.

ದಿನಾಂಕ:14.11.2002ರಲ್ಲಿ FWA (Frame Work Agreement Section 6.6-3 ಪ್ರಕಾರ ಅನುಮೋದಿತ ವೇಳಾಪಟ್ಟಿಯಂತೆ ದಿನಾಂಕ:29.03.2012ರೊಳಗೆ ನಾಲ್ಕು ಪಥದ ಕಾಂಕ್ರೀಟ್ ರಸ್ತೆ ನಿರ್ಮಿಸುವ ಷರತ್ತಿನೊಂದಿಗೆ ಟೋಲ್ ಸಂಗ್ರಹಿಸಲು ಸಚಿವ ಸಂಪುಟದ ಅನುಮೋದನೆಯೊಂದಿಗೆ ಅನುಮತಿಸಲಾಗಿತ್ತೆಂದು ಸಭೆಗೆ ವಿವರಿಸಿದರು. ಆದರೆ ಕಂಪನಿಯು ಷರತ್ತಿನಂತೆ ಕಾಂಕ್ರೀಟ್ ರಸ್ತೆ ನಿರ್ಮಿಸದೆ ಟೋಲ್ ಸಂಗ್ರಹಿಸುತ್ತಿರುವುದರಿಂದ ದಿನಾಂಕ:05.05.2016ರಂದು ಒಂದು Default Notice ನೀಡಲಾಗಿದೆ ಎಂದು ತಿಳಿಸಿದರು. ಈ Default Notice ವಿರುದ್ಧವಾಗಿ, ರಿಟ್ ಅರ್ಜಿ ಸಂಖ್ಯೆ: 12109-110/2016ರಲ್ಲಿ ಮಾನ್ಯ

ನ್ಯಾಯಾಲಯದಲ್ಲಿ ಪ್ರಶ್ನಿಸಿ ತಡೆಯಾಜ್ಞೆ ತಂದಿರುವುದಾಗಿ ವಿವರಿಸಿದರು. ಈ ತಡೆಯಾಜ್ಞೆಯನ್ನು ತೆರವುಗೊಳಿಸಲು ದಿನಾಂಕ:04.03.2018ರಲ್ಲಿ ಸರ್ಕಾರವು ಅರ್ಜಿ ಸಲ್ಲಿಸಿದ್ದು, ವಿಚಾರಣಾ ಹಂತದಲ್ಲಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಮತ್ತು ಮಾನ್ಯ ಕಂದಾಯ ಸಚಿವರು Default Notice ನೀಡುವ ಪೂರ್ವದಲ್ಲಿ ನ್ಯಾಯಾಲಯದಲ್ಲಿ Caveat ಯಾಕೆ ಹಾಕಲಿಲ್ಲ ಎಂದು ಪ್ರಶ್ನಿಸುತ್ತಾ, ಸಾರ್ವಜನಿಕರಿಗೆ ಈ ರೀತಿ ಟೋಲ್ ವಿಧಿಸುತ್ತಿರುವುದು ತೊಂದರೆಯಾಗಿದ್ದು, ನ್ಯಾಯಾಲಯದ ತಡೆಯಾಜ್ಞೆ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕಾಗಿದೆ ಎಂದು ತಿಳಿಸಿದರು.

ಕೆ.ಐ.ಎ.ಡಿ.ಬಿ. ಯಿಂದ Peripheral Road, Link Road ಗಳಿಗೆ ಭೂಸ್ವಾಧೀನ ಪ್ರಕ್ರಿಯೆಯಂತೆ 28(1) ಮತ್ತು 28 (4) ಅಧಿಸೂಚನೆಯಾಗಿದ್ದು, ಈ ವಿಷಯದ ಕುರಿತು ಮತ್ತು ಈಗಾಗಲೇ ನೈಸ್ ಸಂಸ್ಥೆಯ ಬಳಿ ಸುಮಾರು 250 ಎಕರೆ ಜಮೀನು ಪೊಜೆಷನ ನಲ್ಲಿದ್ದು, ಆದರೆ ಈ ಜಮೀನು, ಯೋಜನೆಗೆ FWA (Frame Work Agreement) ಮತ್ತು ಸೋಮಶೇಖರ್‌ರೆಡ್ಡಿ ಪ್ರಕರಣದಂತೆ ಅವಶ್ಯಕವಿಲ್ಲವೆಂದು ಈಗಾಗಲೇ ಮಾನ್ಯ ಸುಪ್ರೀಂಕೋರ್ಟ್‌ನಲ್ಲಿ ಅಫಿಡೆವಿಟ್ ಸಲ್ಲಿಸಿದ್ದು, ಈ ಹಿನ್ನಲೆಯಲ್ಲಿ ಜಮೀನು ಸ್ವಾಧೀನಪಡಿಸಿಕೊಳ್ಳುವ ಕುರಿತು ವಿವರವಾಗಿ ಚರ್ಚಿಸಲಾಯಿತು.

ಅಪರ ಮುಖ್ಯ ಕಾರ್ಯದರ್ಶಿಗಳು ಲೋಕೋಪಯೋಗಿ ಇಲಾಖೆ ರವರು ಮಾತನಾಡುತ್ತ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಂಗ ನಿಂದನ ಅರ್ಜಿ ಪ್ರಕರಣದಲ್ಲಿ ಎರಡೂ ಪಕ್ಷಗಳು ಮೂಲ FWA ಅನುಗುಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕಾಗಿ Under taking ನೀಡಲಾಗಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.

ನೈಸ್ ಕಂಪನಿಯ ವಶದಲ್ಲಿನ ಮೆಟ್ರೋ ಯೋಜನೆಗೆ ಬೇಕಾದ ಜಮೀನುಗಳ ಕುರಿತು ಚರ್ಚಿಸಲಾಯಿತು. ಬಿ.ಎಂ.ಆರ್.ಸಿ.ಎಲ್ ಯೋಜನೆಯ ವ್ಯವಸ್ಥಾಪಕ ನಿರ್ದೇಶಕರು ರವರು ಈ ಕುರಿತು ಒಂದು ನಿರ್ಧಾರ ತೆಗೆದುಕೊಳ್ಳಬೇಕಾಗಿದೆ ಎಂದು ಸಭೆಗೆ ಮನವಿ ಮಾಡಿದರು. ಈ ವಿಷಯದ ಕುರಿತು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು ಮಾತನಾಡುತ್ತಾ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ದಿನಾಂಕ: 16.12.2019ರಲ್ಲಿ ಚರ್ಚಿಸಿದಂತೆ ಕ್ರಮಕೈಗೊಳ್ಳುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಬಿ.ಎಂ.ಐ.ಸಿ.ಪಿ. ಪ್ರಾಧಿಕಾರ ಹೊರಡಿಸಿದ ಓ.ಡಿ.ಪಿ ಕುರಿತು ಚರ್ಚೆ ಮಾಡಲಾಗಿ, FWA (Frame Work Agreement) ಅನುಸಾರ ಓ.ಡಿ.ಪಿ.ಯನ್ನು ಪರಿಷ್ಕರಿಸುವ ಬಗ್ಗೆ ಚರ್ಚಿಸಲಾಯಿತು. ಈ ವಿಷಯದ ಕುರಿತು ಈಗಾಗಲೇ ಮಾನ್ಯ ಸರ್ವೋಚ್ಚ ನ್ಯಾಯಾಲಯ ಬಿ.ಎಂ.ಐ.ಸಿ.ಪಿ.ಎ ಮತ್ತು ಲೋಕೋಪಯೋಗಿ ಇಲಾಖೆರವರು ಎಸ್.ಎಲ್.ಪಿ. ಸಲ್ಲಿಸಿರುವ ಬಗ್ಗೆ ಸಭೆಗೆ ಮಾಹಿತಿ ನೀಡಲಾಯಿತು.

ಕೊನೆಯಲ್ಲಿ ಇದು ಪ್ರಥಮ ಸಭೆಯಾಗಿದ್ದು, ಮುಂದಿನ ಸಭೆಯಲ್ಲಿ ವಿಷಯವಾರು ಚರ್ಚಿಸೋಣ ಹಾಗೂ ಆ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯಪಡೆದು ವಿಷಯವನ್ನು ಸಭೆಯ ಮುಂದೆ ಮಂಡಿಸುವುದು ಸೂಕ್ತವೆಂದು ಅಭಿಪ್ರಾಯಪಡಲಾಯಿತು. ಈ ಎಲ್ಲಾ ಪ್ರಮುಖ ವಿಷಯಗಳಲ್ಲಿ ಕಾನೂನು ಸಲಹೆ ಪಡೆಯುವುದು ಸೂಕ್ತವೆಂದು ಈ ಕುರಿತು, ಕಾನೂನು ಇಲಾಖೆಗೆ ಒಂದು ಪ್ರಸ್ತಾವನೆ ಕಳುಹಿಸಲು ಲೋಕೋಪಯೋಗಿ ಇಲಾಖೆಗೆ ನಿರ್ದೇಶನ ನೀಡಲಾಯಿತು.

ಸಭೆಯು ವಂದನೆಗಳೊಂದಿಗೆ ಮುಕ್ತಾಯವಾಯಿತು.

(ಗೋವಿಂದ ಎಂ ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು
(ಲೋಕೋಪಯೋಗಿ ಹಾಗೂ
ಸಮಾಜ ಕಲ್ಯಾಣ ಇಲಾಖೆ)

(ಡಾ:ಸಿ.ಎನ್.ಅಶ್ವಥ್‌ನಾರಾಯಣ)
ಮಾನ್ಯ ಉಪ ಮುಖ್ಯಮಂತ್ರಿಗಳು
(ಉನ್ನತ ಶಿಕ್ಷಣ, ಐ.ಟಿ., ಬಿಟಿ ಮತ್ತು
ಕೌಶಲ್ಯಾಭಿವೃದ್ಧಿ ಇಲಾಖೆ)

(ಬಸವರಾಜ ಬೊಮ್ಮಾಯಿ)
ಮಾನ್ಯ ಗೃಹ ಸಚಿವರು

(ಜೆ.ಸಿ.ಮಾಧುಸ್ವಾಮಿ)
ಮಾನ್ಯ ಕಾನೂನು, ಸಂಸದೀಯ
ವ್ಯವಹಾರಗಳು ಮತ್ತು ಸಣ್ಣ
ನೀರಾವರಿ ಸಚಿವರು

(ಆರ್.ಅಶೋಕ)
ಮಾನ್ಯ ಕಂದಾಯ ಸಚಿವರು

(ಎಸ್.ಟಿ.ಸೋಮಶೇಖರ್)
ಮಾನ್ಯ ಸಹಕಾರ ಸಚಿವರು

ಅನುಬಂಧ - 3



ಕರ್ನಾಟಕ ಸರ್ಕಾರ

ಸಂಖ್ಯೆ: ಸಸಂಶಾ [illegible] ಸಿಎಸ್‌ಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ: 04.12.2020

## ಅಧಿಕೃತ ಜ್ಞಾಪನ

ವಿಷಯ: NICE (ನೈಸ್) ಯೋಜನೆಯಡಿ ಬರುವ ಜಮೀನುಗಳ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ರಚಿಸಲಾಗಿರುವ ಸಚಿವ ಸಂಪುಟ ಉಪ ಸಮಿತಿಯನ್ನು ಪುನರ್‌ರಚಿಸುವ ಬಗ್ಗೆ.

ಉಲ್ಲೇಖ: 1) ದಿನಾಂಕ:18.02.2020ರ ಅಧಿಕೃತ ಜ್ಞಾಪನ ಸಂಖ್ಯೆ: ಸಸಂಶಾ 12 ಸಿಎಸ್‌ಸಿ 2020.

2) ದಿನಾಂಕ:27.11.2020ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯ (ಸಚಿವ ಸಂಪುಟ ಪ್ರಕರಣ ಸಂಖ್ಯೆ: 603/2020)

====

NICE (ನೈಸ್) ಯೋಜನೆಯಡಿ ಬರುವ ಜಮೀನುಗಳ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ದಿನಾಂಕ:18.02.2020ರ ಅಧಿಕೃತ ಜ್ಞಾಪನದಲ್ಲಿ ರಚಿಸಲಾಗಿದ್ದ ಸಚಿವ ಸಂಪುಟ ಉಪ ಸಮಿತಿಯನ್ನು, ಈ ಕೆಳಕಂಡಂತೆ ಪುನರ್‌ರಚಿಸಲಾಗಿದೆ.

| | | |
|---|---|---|
| 1 | ಶ್ರೀ ಗೋವಿಂದ ಎಂ. ಕಾರಜೋಳ<br>ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ) | ಅಧ್ಯಕ್ಷರು |
| 2 | ಶ್ರೀ ಆರ್. ಅಶೋಕ<br>ಮಾನ್ಯ ಕಂದಾಯ ಸಚಿವರು. | ಸದಸ್ಯರು |
| 3 | ಶ್ರೀ ಜಗದೀಶ ಶೆಟ್ಟರ್<br>ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು. | ಸದಸ್ಯರು |
| 4 | ಶ್ರೀ ಎಸ್.ಟಿ. ಸೋಮಶೇಖರ್<br>ಮಾನ್ಯ ಸಹಕಾರ ಸಚಿವರು. | ಸದಸ್ಯರು |

ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು 1977ರ ನಿಯಮ 13(5) ಹಾಗೂ ಸುತ್ತೋಲೆ ಸಂಖ್ಯೆ:ಡಿಪಿಎ (ಎಂ).98/2001 ದಿನಾಂಕ: 29.03.2001ರ ಪ್ರಕಾರ "ಲೋಕೋಪಯೋಗಿ ಇಲಾಖೆ"ಯು ಈ ಸಚಿವ ಸಂಪುಟ ಉಪ ಸಮಿತಿಗೆ ಅಗತ್ಯ ನೆರವು ನೀಡುವುದು.

(ಆರ್.ಚಂದ್ರಶೇಖರ್)
ಸರ್ಕಾರದ ಉಪ ಕಾರ್ಯದರ್ಶಿ
(ಸಚಿವ ಸಂಪುಟ)

ಇವರಿಗೆ:

1. ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ)
2. ಮಾನ್ಯ ಕಂದಾಯ ಸಚಿವರು

ಅನುಬಂಧ-4

**ದಿನಾಂಕ 12.03.2021 ರಂದು ನಡೆದ ನೈಸ್ ಯೋಜನೆಯಡಿ ಬರುವ ಜಮೀನುಗಳ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಪರಿಶೀಲಿಸಿ ಶಿಫಾರಸ್‌ಗಳನ್ನು ಮಾಡಲು ರಚಿಸಲಾಗಿರುವ ಸಚಿವ ಸಂಪುಟ ಉಪ ಸಮಿತಿಯ ಸಭೆಯ ನಡವಳಿಗಳು.**

ಸಭೆಯಲ್ಲಿ ಹಾಜರಿದ್ದವರ ಪಟ್ಟಿಯನ್ನು ಲಗತ್ತಿಸಲಾಗಿದೆ.

ಮೊದಲಿಗೆ ಸಭೆಯಲ್ಲಿ ಹಾಜರಿದ್ದ ಮಾನ್ಯ ಸಚಿವರುಗಳು ಹಾಗೂ ಅಧಿಕಾರಿಗಳನ್ನು ಸಚಿವ ಸಂಪುಟ ಉಪ ಸಮಿತಿಯ ಅಧ್ಯಕ್ಷರಾದ ಮಾನ್ಯ ಉಪ ಮುಖ್ಯಮಂತ್ರಿ (ಲೋಕೋಪಯೋಗಿ) ಯವರು ಸ್ವಾಗತಿಸಿದರು.

ಸಭೆಯ ವಿಷಯಸೂಚಿಯಂತೆ, ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಸೂಚಿಸಲಾಯಿತು.

ಅಜೆಂಡಾ - 1 - ಸಚಿವ ಸಂಪುಟ ಉಪಸಮಿತಿಯನ್ನು ಪುನರ್ ರಚಿಸಿರುವ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು.

ಅಜೆಂಡಾ - 2 - ಬಿ.ಎಂ.ಐ.ಸಿ.ಪಿ ಯೋಜನೆಯ ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸಲು ನೇಮಕ ಮಾಡಿರುವ ವಕೀಲರ ವಿವರಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಅಜೆಂಡಾ - 3 - ನ್ಯಾಯಾಲಯ ಪ್ರಕರಣಗಳ ಕುರಿತಂತೆ ಸಭೆಯ ಗಮನಕ್ಕೆ ತರಲಾಯಿತು.

ಅಜೆಂಡಾ - 4 - ದಿನಾಂಕ 19.03.2020 ರಂದು ನಡೆದ ಸಚಿವ ಸಂಪುಟ ಉಪಸಮಿತಿಯ ಸಭೆಯ ನಡವಳಿಯನ್ವಯ ಕೈಗೊಂಡ ಕ್ರಮಗಳ ವಿವರಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಅಜೆಂಡಾ - 5 - ಸದನ ಸಮಿತಿಯ ವರದಿಯಲ್ಲಿನ ಅಂಶಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಅಜೆಂಡಾ - 6 - ನೈಸೆಲ್ ಸಂಸ್ಥೆಯು ನೈಸ್ ರಸ್ತೆಯಲ್ಲಿ ನಿರ್ಮಿಸಿರುವ ಟೋಲ್ ಬೂತ್ ಗಳಲ್ಲಿ ಫಾಸ್ಟ್ ಟ್ಯಾಗ್ ಅಳವಡಿಸಲು ಕೋರಿಕೆ ಸಲ್ಲಿಸಿರುವ ಬಗ್ಗೆ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆರವರು ಸಭೆಯ ಗಮನಕ್ಕೆ ತರಲಾಗಿ ಈ ಬಗ್ಗೆ ಟೋಲ್ ಸಂಗ್ರಹಣೆಯ ಪೂರ್ಣ ವಿವರಗಳೊಂದಿಗೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಮತ್ತು ಕಾನೂನು ಇಲಾಖೆಯ ಅಭಿಪ್ರಾಯದೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**(ಕ್ರಮ: ಲೋಕೋಪಯೋಗಿ ಇಲಾಖೆ / ಮುಖ್ಯ ಇಂಜಿನಿಯರ್, ಸಂ&ಕ(ದಕ್ಷಿಣ)**

ಅಜೆಂಡಾ - 7 - ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆಗಾಗಿ ಭೂಸ್ವಾಧೀನ ಮಾಡಿಕೊಳ್ಳಲು ನಿಯಮ 3(1), 28(1) ಹಾಗೂ 28(4) ಹೊರಡಿಸಿರುವ ಅಧಿಸೂಚನೆಗಳ ಕುರಿತಂತೆ ಜಮೀನುಗಳ ಹಾಗೂ ಅಧಿಸೂಚನೆಗಳ ಸಂಪೂರ್ಣ ವಿವರಗಳನ್ನು ಮುಂದಿನ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ಹಾಜರಿದ್ದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧಿಕಾರಿಯವರಿಗೆ ಸೂಚಿಸಲಾಯಿತು.

**(ಕ್ರಮ: ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ / ಕೆ.ಐ.ಎ.ಡಿ.ಬಿ )**

ಅಜೆಂಡಾ - 8 - ಬಿ.ಎಂ.ಐ.ಸಿ ಯೋಜನೆಗೆ ಅಗತ್ಯವಿಲ್ಲದ ಕೆ.ಐ.ಎ.ಡಿ.ಬಿ ಸ್ವಾಧೀನ ಪಡಿಸಿಕೊಂಡಿರುವ ಹೆಚ್ಚುವರಿ ಭೂಮಿಯ ಕುರಿತಂತೆ ಸಂಪೂರ್ಣ ವಿವರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ ಸೂಚಿಸಲಾಯಿತು.

(ಕ್ರಮ: ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ / ಕೆ.ಐ.ಎ.ಡಿ.ಬಿ )

ಅಜೆಂಡಾ - 9 - ನೈಸ್ ಸಂಸ್ಥೆಯು ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡದೇ ಟೋಲ್ ಸಂಗ್ರಹಿಸುತ್ತಿರುವ ಕುರಿತಂತೆ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ರವರು ನೈಸ್ ಸಂಸ್ಥೆಗೆ ಈಗಾಗಲೇ ಡಿಫಾಲ್ಟ್ ನೋಟಿಸ್ ನೀಡಲಾಗಿದ್ದು, ಈ ನೋಟಿಸ್ ಗೆ ನೈಸ್ ಸಂಸ್ಥೆಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಪ್ರಕರಣ ದಾಖಲಿಸಿ ತಡೆಯಾಜ್ಞೆ ಪಡೆದಿದ್ದು, ಪ್ರಸ್ತುತ ಪ್ರಕರಣ ಮಾನ್ಯ ನ್ಯಾಯಾಲಯದಲ್ಲಿ ಬಾಕಿ ಇರುವುದಾಗಿ ಸಭೆಗೆ ವಿವರಿಸಿದರು. ಪ್ರಕರಣದ ಕುರಿತಂತೆ ಕಾನೂನು ರೀತಿ ಕ್ರಮ ವಹಿಸುವಂತೆ ಸಭೆಯು ಸೂಚಿಸಿತು.

(ಕ್ರಮ: ಲೋಕೋಪಯೋಗಿ ಇಲಾಖೆ / ಮುಖ್ಯ ಇಂಜಿನಿಯರ್ (ದಕ್ಷಿಣ)

ಅಜೆಂಡಾ - 10 - ಒ.ಡಿ.ಪಿ ಪರಿಷ್ಕರಣೆ ಕುರಿತಂತೆ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರು ಸಭೆಯ ಗಮನಕ್ಕೆ ರೋಡ್ ಅಲೈನ್ ಮೆಂಟ್ ಬಗ್ಗೆ ಅಂತಿಮ ನಿರ್ಧಾರ ಕೈಗೊಂಡ ನಂತರ ಒ.ಡಿ.ಪಿ ಪರಿಷ್ಕರಣೆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

(ಕ್ರಮ: ಲೋಕೋಪಯೋಗಿ ಇಲಾಖೆ/ ಮುಖ್ಯ ಇಂಜಿನಿಯರ್ (ದಕ್ಷಿಣ)/
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ / ಕೆ.ಐ.ಎ.ಡಿ.ಬಿ / ನಗರಾಭಿವೃದ್ಧಿ ಇಲಾಖೆ)

ಅಜೆಂಡಾ - 11 - ನೈಸ್ ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಂಡಿರುವ ಹೆಚ್ಚುವರಿ ಭೂಮಿಯನ್ನು ಬಿ.ಡಿ.ಎ ನಿರ್ಮಾಣ ಮಾಡುತ್ತಿರುವ ಪಿ.ಆರ್.ಆರ್. ರಸ್ತೆಗೆ ಬಳಸಿಕೊಳ್ಳಲು ಅನುಮತಿಸುವಂತೆ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರು ಸಭೆಯ ಗಮನಕ್ಕೆ ತರಲಾಗಿ, ಈ ಬಗ್ಗೆ ಲಭ್ಯವಿರುವ ಹಾಗೂ ಅವಶ್ಯವಿರುವ ಜಮೀನಿನ ವಿವರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ ನಗರಾಭಿವೃದ್ಧಿ ಇಲಾಖೆ ಹಾಗೂ ಕೆ.ಐ.ಎ.ಡಿ.ಬಿ ರವರಿಗೆ ಸಭೆಯು ಸೂಚಿಸಿತು.

(ಕ್ರಮ: ಕೆ.ಐ.ಎ.ಡಿ.ಬಿ / ನಗರಾಭಿವೃದ್ಧಿ ಇಲಾಖೆ)

ಕಾನೂನು ಇಲಾಖೆಯ ಅಧಿಸೂಚನೆ ಸಂಖ್ಯೆ: ಲಾ 127 ಎಲ್ ಎ ಎಮ್ 2020 ದಿ: 5.09.2020 ರಲ್ಲಿ ಶ್ರೀ. ಎಚ್. ಕೆ. ಜಗದೀಶ್, ವಿಶೇಷ ಕಾರ್ಯದರ್ಶಿಯವರನ್ನು ಬೆಂಗಳೂರು-ಮೈಸೂರು ಮೂಲ ಸೌಕರ್ಯ ಕಾರಿಡಾರ್ ಯೋಜನೆಯ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ, ಸಮನ್ವಯಾಧಿಕಾರಿಯಾಗಿ ನೇಮಿಸಿರುವ ಹಿನ್ನಲೆಯಲ್ಲಿ ಸದರಿಯವರು ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಹಾಜರಿದ್ದು, ನೈಸ್ ಯೋಜನೆಯ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ವಿವಿಧ ಇಲಾಖೆಗಳಿಂದ ಸಾಮಾನ್ಯ ಅಭಿಪ್ರಾಯ ಕೋರಿ ಅಥವಾ ವ್ಯಾಜ್ಯ ವಿಷಯಕ್ಕೆ ಸಂಬಂಧಿಸಿಂತೆ, ಎಲ್ಲ ಸಂಬಂಧಪಟ್ಟ ಇಲಾಖೆಗಳಿಂದ ಕಡತಗಳು ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ ರವರಿಗೆ ನೇರವಾಗಿ ಸಲ್ಲಿಕೆಯಾಗುತ್ತದೆ. ಸದರಿಯವರ ಹಂತದಲ್ಲಿ ಈ ಕಡತಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಅಭಿಪ್ರಾಯ ಅಥವಾ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ಅಗತ್ಯ ಕ್ರಮಗಳನ್ನು ವಹಿಸಲಾಗುತ್ತದೆ. ವಿಶೇಷ ಕಾರ್ಯದರ್ಶಿಯವರಿಗೆ ಅಂತಹ

ಯಾವುದೇ ಕಡತಗಳು ಅಭಿಪ್ರಾಯಕ್ಕಾಗಲೀ ಅಥವಾ ವ್ಯಾಜ್ಯಗಳಿಗೆ ಸಂಬಂಧಿಸಿದ ಕ್ರಮಕ್ಕಾಗಲಿ ಬರುವಂತಹ ಸಂದರ್ಭಗಳು ಇರುವುದಿಲ್ಲ ಎಂಬುದಾಗಿ ಸಮಿತಿ ಸಭೆಗೆ ತಿಳಿಸಿರುತ್ತಾರೆ. ಮುಂದುವರೆದು, ವಿಶೇಷ ಕಾರ್ಯದರ್ಶಿಯವರು ಮೇಲ್ಕಂಡ ಅಧಿಸೂಚನೆಯನ್ವಯ ಸಮನ್ವಯಾಧಿಕಾರಿಯಾಗಿ ನೇಮಿಸಿರುವುದನ್ನ ಮಾರ್ಪಡಿಸಿ ಪ್ರಧಾನ ಕಾರ್ಯದರ್ಶಿಗಳು ಕಾನೂನು ಇಲಾಖೆ ರವರನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ ಸಮನ್ವಯಾಧಿಕಾರಿಯಾಗಿ ನೇಮಕ ಮಾಡುವುದು ಸೂಕ್ತವಾಗುತ್ತದೆಂದು, ಅಂತಹ ನೇಮಕದಿಂದ ಕಾನೂನು ಇಲಾಖೆಯ ವತಿಯಿಂದ ಹೆಚ್ಚಿನ ಸಹಕಾರ ದೊರೆಯುವುದರ ಜೊತೆಗೆ ಮಾನ್ಯ ಅಡ್ವಕೇಟ್ ಜನರಲ್ ರವರ ಜೊತೆಯಲ್ಲೂ ಸಹ ಅಗತ್ಯ ಸಂದರ್ಭಗಳಲ್ಲಿ ಸಮನ್ವಯ ಸಾಧಿಸಲು ಅನುಕೂಲವಾಗುತ್ತದೆ ಎಂಬುವುದಾಗಿ ವಿಶೇಷ ಕಾರ್ಯದರ್ಶಿಗಳು ಸಚಿವ ಸಂಪುಟ ಉಪ ಸಮಿತಿಯ ಮುಂದೆ ವಿವರಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾನೂನು ಇಲಾಖೆರವರನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ, ಸಮನ್ವಯಾಧಿಕಾರಿಯಾಗಿ ನೇಮಕ ಮಾಡುವುದು ಸೂಕ್ತವಾಗಿದೆ ಎಂಬುವುದಾಗಿ ಸಚಿವ ಸಂಪುಟದ ಉಪ ಸಮಿತಿಯು ನಿರ್ಣಯಿಸಿ, ಕಾನೂನು ಇಲಾಖೆಯ ಅಧಿಸೂಚನೆ ಸಂಖ್ಯೆ: ಲಾ 127 ಎಲ್ ಎ ಎಮ್ 2020 ದಿ: 5.09.2020 ಅಧಿಸೂಚನೆಯನ್ನು ಮಾರ್ಪಡಿಸಿ ಸರ್ಕಾರದ ವಿಶೇಷ ಕಾರ್ಯದರ್ಶಿಗಳು ಕಾನೂನು ಇಲಾಖೆ ರವರ ಬದಲಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಾನೂನು ಇಲಾಖೆ ರವರನ್ನು ಸಮನ್ವಯಾಧಿಕಾರಿಯಾಗಿ ನೇಮಿಸಿ ಆದೇಶ ಹೊರಡಿಸುವ ಬಗ್ಗೆ ಮತ್ತು ಮುಂದಿನ ಸಭೆಗೆ ಸದರಿಯವರು ತಪ್ಪದೇ ಹಾಜರಿರುವ ಬಗ್ಗೆ ಸಮಿತಿಯು ಸೂಚಿಸಿತು.

**(ಕ್ರಮ: ಲೋಕೋಪಯೋಗಿ ಇಲಾಖೆ/ಕಾನೂನು ಇಲಾಖೆ)**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಗೋವಿಂದ ಎಂ ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು
(ಲೋಕೋಪಯೋಗಿ ಇಲಾಖೆ)

(ಆರ್.ಅಶೋಕ)
ಮಾನ್ಯ ಕಂದಾಯ ಸಚಿವರು

(ಜಗದೀಶ್ ಶೆಟ್ಟರ್)
ಮಾನ್ಯ ವಾಣಿಜ್ಯ ಮತ್ತು ಬೃಹತ್ ಕೈಗಾರಿಕಾ ಸಚಿವರು

(ಎಸ್.ಟಿ.ಸೋಮಶೇಖರ್)
ಮಾನ್ಯ ಸಹಕಾರ ಸಚಿವರು

ಅನುಬಂಧ-5

ಕರ್ನಾಟಕ ಸರ್ಕಾರ

ಸಂಖ್ಯೆ: ಸಸಂಶಾ 33 ಸಿಎಸ್‌ಸಿ 2021

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 05.10.2021

## ಅಧಿಕೃತ ಜ್ಞಾಪನ

ವಿಷಯ: NICE (ನೈಸ್) ಯೋಜನೆಯಡಿ ಬರುವ ಜಮೀನುಗಳ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸುವ ಬಗ್ಗೆ.

ಉಲ್ಲೇಖ: ದಿನಾಂಕ 19.08.2021ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯ (ಸಚಿವ ಸಂಪುಟ ಪ್ರಕರಣ ಸಂಖ್ಯೆ: ಸಿ.330/2021.)

******

NICE (ನೈಸ್) ಯೋಜನೆಯಡಿ ಬರುವ ಜಮೀನುಗಳ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಈ ಕೆಳಕಂಡ ಸಚಿವರುಗಳನ್ನೊಳಗೊಂಡ ಸಚಿವ ಸಂಪುಟದ ಒಂದು ಉಪಸಮಿತಿಯನ್ನು ರಚಿಸಲಾಗಿದೆ:

| | | |
|---|---|---|
| 1 | ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ<br>ಮಾನ್ಯ ಲೋಕೋಪಯೋಗಿ ಸಚಿವರು. | ಅಧ್ಯಕ್ಷರು |
| 2 | ಶ್ರೀ ಆರ್. ಅಶೋಕ<br>ಮಾನ್ಯ ಕಂದಾಯ ಸಚಿವರು. | ಸದಸ್ಯರು |
| 3 | ಶ್ರೀ ಗೋವಿಂದ ಎಂ. ಕಾರಜೋಳ<br>ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು. | ಸದಸ್ಯರು |
| 4 | ಶ್ರೀ ಎಸ್.ಟಿ. ಸೋಮಶೇಖರ್<br>ಮಾನ್ಯ ಸಹಕಾರ ಸಚಿವರು. | ಸದಸ್ಯರು |

...2

[illegible] [illegible] ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ [illegible] [illegible] ಸಂಖ್ಯೆ: ಡಿಪಿಎ(ಎಂ). 98/2001 ದಿನಾಂಕ 29.03.2001ರ [illegible] ಲೋಕೋಪಯೋಗಿ ಇಲಾಖೆಯು ಈ ಸಚಿವ ಸಂಪುಟ ಉಪಸಮಿತಿಗೆ ಅಗತ್ಯ ನೆರವು ನೀಡುವುದು.

(ಆರ್. ಚಂದ್ರಶೇಖರ್)
ಸರ್ಕಾರದ ಜಂಟಿ ಕಾರ್ಯದರ್ಶಿ
(ಸಚಿವ ಸಂಪುಟ)

ಪ್ರತಿಗೆ:

1. ಮಾನ್ಯ ಲೋಕೋಪಯೋಗಿ ಸಚಿವರು.
2. ಮಾನ್ಯ ಕಂದಾಯ ಸಚಿವರು.
3. ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು.
4. ಮಾನ್ಯ ಸಹಕಾರ ಸಚಿವರು.
5. ಸರ್ಕಾರದ ಮುಖ್ಯ ಕಾರ್ಯದರ್ಶಿ.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
8. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಅನುಬಂಧ-6

**ದಿನಾಂಕ:14.02.2022ರಂದು ನಡೆದ ನೈಸ್ ಯೋಜನೆಯಡಿ ಇರುವ ವ್ಯಾಜ್ಯಗಳ ಕುರಿತು ಪರಿಶೀಲಿಸಿ ಶಿಫಾರಸ್ಸುಗಳನ್ನು ಮಾಡಲು ರಚಿಸಲಾಗಿರುವ ಸಚಿವ ಸಂಪುಟ ಉಪ ಸಮಿತಿ ಸಭೆಯ ನಡವಳಿಗಳು.**

ಸಭೆಯಲ್ಲಿ ಹಾಜರಿದ್ದವರ ಪಟ್ಟಿಯನ್ನು ಲಗತ್ತಿಸಲಾಗಿದೆ.

ಮೊದಲಿಗೆ ಸಭೆಯಲ್ಲಿ ಹಾಜರಿದ್ದ ಮಾನ್ಯ ಸಚಿವರುಗಳು ಹಾಗೂ ಅಧಿಕಾರಿಗಳನ್ನು ಸಚಿವ ಸಂಪುಟ ಉಪ ಸಮಿತಿಯ ಅಧ್ಯಕ್ಷರಾದ ಮಾನ್ಯ ಲೋಕೋಪಯೋಗಿ ಸಚಿವರು ಸ್ವಾಗತಿಸಿದರು.

**ಸಭೆಯ ವಿಷಯಸೂಚಿಯಂತೆ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಸೂಚಿಸಲಾಯಿತು.**

**Agenda-1** -ಸಚಿವ ಸಂಪುಟ ಉಪಸಮಿತಿಯನ್ನು ಮನರ್ ರಚಿಸಿರುವ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು.

**Agenda-2** -ದಿನಾಂಕ: 12.03.2021 ರಂದು ನಡೆದ ಸಚಿವ ಸಂಪುಟ ಉಪಸಮಿತಿಯ ಸಭೆಯ ತೀರ್ಮಾನಗಳಂತೆ ಕೈಗೊಂಡಿರುವ ಕ್ರಮಗಳ ಕುರಿತು ಚರ್ಚಿಸಲಾಗಿ, ಶ್ರೀ ವೆಂಕಟೇಶ್ ನಾಯಕ್.ಟಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಾನೂನು ಇಲಾಖೆ ಇವರನ್ನು ಯೋಜನೆಯ ಸಮನ್ವಯ ಅಧಿಕಾರಿಯನ್ನಾಗಿ ನೇಮಿಸಿರುವ ಬಗ್ಗೆ ಸಭೆಗೆ ತಿಳಿಸಲಾಯಿತು.

**Agenda-3** -ಬಿ.ಎಂ.ಐ.ಸಿ.ಪಿ ಯೋಜನೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಭೆಯ ಗಮನಕ್ಕೆ ತರಲಾಯಿತು. ಮಾನ್ಯ ಲೋಕೋಪಯೋಗಿ ಸಚಿವರು ನ್ಯಾಯಾಲಯ ಪ್ರಕರಣಗಳು ಬಾಕಿ ಇರುವ ಕುರಿತು ಯೋಜನೆಯ ವಿಶೇಷ ವಕೀಲರುಗಳಿಗೆ ಕೂಡಲೇ ಇತ್ಯರ್ಥಗೊಳಿಸುವಂತೆ ತಿಳಿಸಿದರು. ಹಾಗೂ ಬಿಎಂಐಸಿ ಯೋಜನೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳಲ್ಲಿ ಬಾಕಿ ಇರುವ ಒಟ್ಟಾರೆ ನ್ಯಾಯಾಲಯ ಪ್ರಕರಣಗಳನ್ನು(ಪ್ರಕರಣ ಸಂಖ್ಯೆಗಳೊಂದಿಗೆ), ಪಡೆದು ಪಟ್ಟಿ ಮಾಡಿ ಯೋಜನೆಯ ಸಮನ್ವಯಾಧಿಕಾರಿಯವರಿಗೆ ನೀಡುವಂತೆ ಸೂಚಿಸುತ್ತಾ, ಭೂ–ಸ್ವಾಧೀನ ಪ್ರಕ್ರಿಯೆ ಕುರಿತು ಮಾನ್ಯ ನ್ಯಾಯಲಯಗಳಲ್ಲಿ ಹೆಚ್ಚಿನ ಪ್ರಕರಣಗಳು ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**(ಕ್ರಮ: ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ/ ಕಾನೂನು ಇಲಾಖೆ/ ಲೋಕೋಪಯೋಗಿ ಇಲಾಖೆ)**

**Agenda-4** -ಸಧನ ಸಮಿತಿ ವರದಿಯಲ್ಲಿನ ಅಂಶಗಳ ಕುರಿತು ಸಭೆಯ ಗಮನಕ್ಕೆ ತರಲಾಯಿತು. ಈ ಬಗ್ಗೆ ಮಾನ್ಯ ಸಹಕಾರ ಸಚಿವರು ಕೂಲಂಕಷವಾಗಿ ವಿವರಿಸಿ, ಸಧನ ಸಮಿತಿ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಇಲಾಖಾವಾರು ಕೂಡಲೇ ಕ್ರಮ ಕೈಗೊಂಡು ವರದಿಗಳನ್ನು ನೀಡುವಂತೆ ಸೂಚಿಸಲಾಯಿತು.

**(ಕ್ರಮ: ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ/ ಲೋಕೋಪಯೋಗಿ ಇಲಾಖೆ/ ಕಂದಾಯ ಇಲಾಖೆ/ ನಗರಾಭಿವೃದ್ಧಿ ಇಲಾಖೆ/ ವಸತಿ ಇಲಾಖೆ/ ಅರಣ್ಯ ಇಲಾಖೆ/ಕಾನೂನು ಇಲಾಖೆ)**

Agenda-5 -ಫೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆಗಳಿಗೆ ಸಂಬಂಧಿಸಿದಂತೆ, ಭೂ-ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳಲ್ಲಿ ನಿಯಮ-28(1) ರನ್ವಯ ಮತ್ತು ನಿಯಮ-28(4) ರ ಪ್ರಕಾರ ಎಷ್ಟು ಜಮೀನುಗಳನ್ನು ಭೂ-ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಸದರಿ ಜಮೀನುಗಳಲ್ಲಿ ಎಷ್ಟು ಎಕರೆಗೆ ಅವಾರ್ಡ್ ಪಾಸ್ ಮಾಡಲಾಗಿದೆ, ಎಷ್ಟು ಎಕರೆ ಸೇಲ್ ಡೀಡ್ ಆಗಿದೆ ಹಾಗೂ ಎಷ್ಟು ಎಕರೆ ಕೈಬಿಡಲಾಗಿದೆ ಎಂದು ನಕ್ಷೆಯಲ್ಲಿ ಗುರುತಿಸಿ, 10 ದಿನದೊಳಗಾಗಿ ಮಾಹಿತಿಯನ್ನು ನೀಡುವಂತೆ ಸೂಚಿಸಲಾಯಿತು. ಸದರಿ ಮಾಹಿತಿಯನ್ನು ನೀಡುವುದಾಗಿ ಸಭೆಗೆ ತಿಳಿಸಲಾಯಿತು.

(ಕ್ರಮ: ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ/ ಕೆ.ಐ.ಎ.ಡಿ.ಬಿ)

Agenda-6-7 -ಬಿಎಂಐಸಿ ಯೋಜನೆಗಾಗಿ ಭೂ-ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳಿಗೆ ಸಂಬಂಧಿಸಿದಂತೆ, ಸರ್ಕಾರವು ಯೋಜನೆಯು ಪ್ರಾರಂಭಾಗುವ ಸಮಯದಲ್ಲಿ ಆದೇಶಗಳನ್ನು ಹೊರಡಿಸಲಾಗಿದೆಯೇ. ಸದರಿ ಆದೇಶಗಳಲ್ಲಿ ನಿರ್ದಿಷ್ಟವಾದ ಜಮೀನುಗಳ ಸರ್ವೆ ನಂ.ಗಳನ್ನು ನೀಡಿ ಭೂ-ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ ಎಂಬ ಬಗ್ಗೆ ವಿವರಣೆಯನ್ನು ಕೋರಲಾಯಿತು. ಇದರೊಂದಿಗೆ ಯೋಜನೆಗೆ ಸಂಬಂಧಿಸಿದಂತೆ ಹೆಚ್ಚುವರಿ ಜಮೀನುಗಳನ್ನು ಸಹ ಸ್ವಾಧೀನಪಡಿಸಿಕೊಳ್ಳಲಾಗಿದೆಯೇ ಎಂಬ ಬಗ್ಗೆ ಮಾಹಿತಿ ಕೋರಲಾಯಿತು. ಹೆಚ್ಚುವರಿ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡಿದ್ದಲ್ಲಿ, ಯಾವ ಆದೇಶದ ಮೇರೆಗೆ ಕ್ರಮ ಕೈಗೊಳ್ಳಾಗಿದೆ. ಈ ಬಗ್ಗೆ ಸಂಪೂರ್ಣ ವಿವರಣೆ ಅಂದರೆ ಯೋಜನೆಗೆ ನಿಗಧಿಪಡಿಸಲಾಗಿದ್ದ ಒಟ್ಟಾರೆ ಜಮೀನುಗಳ ವಿವರ, ಅದನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ವಿವರಗಳನ್ನು ಹಾಗೂ ದಾಖಲೆಗಳನ್ನು 10 ದಿನದೊಳಗಾಗಿ ಸಲ್ಲಿಸುವಂತೆ ಸೂಚಿಸಲಾಯಿತು. ಸದರಿ ಮಾಹಿತಿಯನ್ನು ನೀಡುವುದಾಗಿ ಸಭೆಗೆ ತಿಳಿಸಲಾಯಿತು.

(ಕ್ರಮ: ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ/ ಕೆ.ಐ.ಎ.ಡಿ.ಬಿ)

Agenda-8 -ನೈಸ್ ರಸ್ತೆಯ ಟೋಲ್‌ಬೂತ್‌ಗಳಲ್ಲಿ ಟೋಲ್ ದರವನ್ನು ಸಂಗ್ರಹಣ ಮಾಡುತ್ತಿರುವುದು ಸಭೆಯ ಗಮನಕ್ಕೆ ತರಲಾಯಿತು. ಈ ಬಗ್ಗೆ ಸುಧೀರ್ಘ ಚರ್ಚೆಯಾಗಿದ್ದು, ಟೋಲ್ ದರವನ್ನು ಯಾವ ಆದೇಶ/ನಿಯಮದಡಿ ನಿಗದಿಪಡಿಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ಕೋರಲಾಯಿತು. ನೈಸ್ ಸಂಸ್ಥೆಯವರು ಮೂಲ FWA ಪ್ರಕಾರ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಾಣ ಮಾಡದೇ ಟಾರ್ ರಸ್ತೆಗಳನ್ನು ನಿರ್ಮಿಸಿ, ಮೂಲ FWA ನ್ನು ಉಲ್ಲಂಘಿಸಿದ್ದರೂ ಸಹ ಟೋಲ್ ಸಂಗ್ರಹಿಸಲು ಏಕೆ ಅನುಮತಿಯನ್ನು ನೀಡಲಾಗಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ಪ್ರಶ್ನಿಸಿದರು. ಅದಕ್ಕೆ ಕಾರ್ಯದರ್ಶಿಗಳು ಲೋಕೋಪಯೋಗಿ ಇಲಾಖೆ ರವರು ನೈಸ್ ಸಂಸ್ಥೆಯವರು ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡದೇ ಟೋಲ್ ಸಂಗ್ರಹಿಸುತ್ತಿರುವ ಕುರಿತು

ಈಗಾಗಲೇ ಸದರಿಯವರಿಗೆ ಸರ್ಕಾರದಿಂದ ಡಿಫಾಲ್ಟ್ ನೋಟೀಸ್‌ನ್ನು ಜಾರಿ ಮಾಡಲಾಗಿರುತ್ತದೆ. ಸದರಿ ನೋಟೀಸ್‌ಗೆ ನೈಸ್ ಸಂಸ್ಥೆಯವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ತಡೆಯಾಜ್ಞೆಯನ್ನು ಪಡೆದಿರುತ್ತಾರೆಂದು ಹಾಗೂ ಸದರಿ ತದೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು. ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು ಮಾನ್ಯ ಉಚ್ಚ ನ್ಯಾಯಲಯದಲ್ಲಿ ದಾಖಲಾಗಿರುವ ತಡೆಯಾಜ್ಞೆಯನ್ನು ತೆರವುಗೊಳಿಸುವಂತೆ ಸೂಚಿಸಲಾಯಿತು. ಹಾಗೂ ಮಾನ್ಯ ಸಹಕಾರ ಸಚಿವರು ಪ್ರಸ್ತುತ ನೈಸ್ ರಸ್ತೆಗಳಲ್ಲಿ ವೈಟ್ ಟಾಪಿಂಗ್ ನಡೆಯುತ್ತಿರುವುದು ಗಮನಕ್ಕೆ ಬಂದಿರುವುದರಿಂದ, ಸದರಿ ಕಾಮಗಾರಿಯು ಮೂಲ FWA ಪ್ರಕಾರ ನಡೆಯುತ್ತಿರುವುದೇ ಎಂಬ ಬಗ್ಗೆ ಸ್ಥಳ ವೀಕ್ಷಣೆ ಮಾಡಿ 10 ದಿನಗೊಳಗಾಗಿ ವರದಿ ಸಲ್ಲಿಸುವಂತೆ ಸೂಚಿಸಲಾಯಿತು. ಅದಕ್ಕೆ ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು ರವರು ಮಾಹಿತಿ/ವರದಿಯನ್ನು ನೀಡುವುದಾಗಿ ಸಭೆಗೆ ತಿಳಿಸಿದರು.

**(ಕ್ರಮ: ಲೋಕೋಪಯೋಗಿ ಇಲಾಖೆ/ ಮುಖ್ಯ ಇಂಜಿನಿಯರ್ ದಕ್ಷಿಣ)**

Agenda-9 -ಬಿಎಂಐಸಿ ಯೋಜನೆಗೆ ಸಂಬಂಧಿಸಿದಂತೆ ಒಟ್ಟಾರೆ ಭೂ-ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳಲ್ಲಿ ಎಷ್ಟು ಜಮೀನುಗಳು ಸರ್ಕಾರಿ ಜಮೀನುಗಳು, ಎಷ್ಟು ಎಕರೆ ಖಾಸಗಿ ಜಮೀನುಗಳು. ಅದರಲ್ಲಿ ಯೋಜನೆಯ ಸಕ್ಷನ್-ಎ ಗಾಗಿ ಎಷ್ಟು ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ, ಸೆಕ್ಷನ್-ಬಿ&ಸಿ ಗಾಗಿ ಎಷ್ಟು ಜಮೀನು ಸ್ವಾಧೀನ ಪಡಿಸಿಕೊಳ್ಳಲಾಗಿದೆ, ಉಳಿದಂತೆ ಈ ಎಲ್ಲಾ ಜಮೀನುಗಳಲ್ಲಿ, ಉಪಯೋಗಿಸಲಾಗಿರುವ ಜಮೀನುಗಳ ಎಷ್ಟು ಯೋಜನೆಗಾಗಿ ಕಾಯ್ದಿರಿಸಲಾಗಿರುವ ಜಮೀನುಗಳು ಎಷ್ಟು, ಇದರೊಂದಿಗೆ ಅವಶ್ಯಕತೆ ಇದ್ದಂತಹ ಜಮೀನುಗಳನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳು ಎಷ್ಟು ಮತ್ತು ಎಷ್ಟು ಜಮೀನುಗಳನ್ನು ಸೇಲ್ ಡೀಡ್ ಮಾಡಲಾಗಿರುತ್ತದೆ ಎಂಬುದರ ಸಂಪೂರ್ಣ ವಿವರಗಳನ್ನು ನೀಡುವಂತೆ ಮಾನ್ಯ ಲೋಕೋಪಯೋಗಿ ಸಚಿವರು ವಿಶೇಷ ಜಿಲ್ಲಾಧಿಕಾರಿಗಳು ಕೆಐಎಡಿಬಿ (ಬಿಎಂಐಸಿಪಿ) ರವರಿಗೆ ಸೂಚಿಸಲಾಯಿತು. ಸದರಿಯವರು ಈ ಎಲ್ಲಾ ಮಾಹಿತಿಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕ್ರೋಢೀಕರಿಸಿ ನಕ್ಷೆಯೊಂದಿಗೆ ಮಾಹಿತಿಯನ್ನು ನೀಡುವುದಾಗಿ ತಿಳಿಸಿದರು. ಸದರಿ ಮಾಹಿತಿಯನ್ನು ಒಂದು ವಾರದೊಳಗಾಗಿ ನೀಡುವಂತರೆ ಸೂಚಿಸಲಾಯಿತು. ವಿಶೇಷ ಜಿಲ್ಲಾಧಿಕಾರಿಗಳು ಕೆಐಎಡಿಬಿ (ಬಿಎಂಐಸಿಪಿ) ರವರು ನೀಡುವುದಾಗಿ ಒಪ್ಪಿಗೆಯನ್ನು ಸಭೆಗೆ ತಿಳಿಸಿದರು.

**(ಕ್ರಮ: ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ/ ಕೆ.ಐ.ಎ.ಡಿ.ಬಿ)**

Agenda-10 -ಪ್ರಧಾನ ಕಾರ್ಯದರ್ಶಿಗಳು ಕಾನೂನು ಇಲಾಖೆ ರವರು ಬಿಎಂಐಸಿ ಯೋಜನೆಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿ ಒಟ್ಟಾರೆ ಜಮೀನುಗಳು ಯೋಜನೆಗೆ ಸ್ವಾಧೀನವಾಗಿರುವ ಕುರಿತು, ಉಪಯೋಗವಾಗಿರುವ ಕುರಿತು. ನೈಸ್ ಸಂಸ್ಥೆಗೆ ಹಸ್ತಾಂತವಾಗಿರುವ ಕುರಿತು, ಸ್ವಾಧೀನವಾಗಿರುವ ಜಮೀನುಗಳಲ್ಲಿ ನೈಸ್ ಸಂಸ್ಥೆಯವರಿಗೆ ಹಸ್ತಾಂತವಾಗದಿರುವ ಜಮೀನುಗಳ ಎಷ್ಟು, ಸ್ವಾಧೀನವಾಗಿರುವ ಜಮೀನುಗಳಲ್ಲಿ ಭೂ-ಮಾಲಿಕರುಗಳಿಗೆ ಪರಿಹಾರ ಮೊತ್ತವನ್ನು ಪಾವತಿಸಲಾಗಿದೇ. ಯೋಜನೆಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳಲ್ಲಿ. ಎಷ್ಟು ಜಮೀನುಗಳು ಮಾನ್ಯ ಉಚ್ಛ ನ್ಯಾಯಾಲಯ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯಗಳಲ್ಲಿ ಪ್ರಕರಣ ಬಾಕಿ ಇರುತ್ತವೆ. (ಪ್ರಕರಣ ಸಂಖ್ಯೆಗಳೊಂದಿಗೆ), ಯೋಜನೆಯ ಟೌನ್‌ಶಿಫ್‌ಗಳ ಯಾವ ಯಾವ ಜಾಗಗಳಲ್ಲಿ ಗುರುತಿಸಲಾಗಿದೆ. ಈ ಎಲ್ಲಾ ಮಾಹಿತಿಗಳನ್ನು (Tabler Coloum) ನಲ್ಲಿ ಮಾಹಿತಿಯನ್ನು ಮುಂದಿನ ಸಭೆ ನಡೆಯುವ 04 ದಿನದೊಳಗಾಗಿ ನೀಡಿದಲ್ಲಿ ಸೂಕ್ತ ಚರ್ಚೆಯಾಗುವುದೆಂದು ಸಭೆಗೆ ತಿಳಿಸಿದರು. ಸದರಿ ಎಲ್ಲಾ ಮಾಹಿತಿಗಳನ್ನು ಇಲಾಖಾವಾರು ಮಾಹಿತಿ ನೀಡುವಂತೆ ಹಾಗೂ ಬಿಎಂಐಸಿ ಯೋಜನೆಗಾಗಿ ತಯಾರಿಸಲಾಗಿರುವ ಮೂಲ ನಕ್ಷೆ ಪ್ರತಿಯನ್ನು ಸಹ ಸಲ್ಲಿಸುವಂತೆ ಸೂಚಿಸಲಾಯಿತು. ಈ ಎಲ್ಲಾ ಮಾಹಿತಿಗಳನ್ನು ಒಂದು ವಾರದೊಳಗಾಗಿ ನೀಡುವಂತೆ ಬಿಎಂಐಸಿಎಪಿಎ, ಕೆಐಎಡಿಬಿ, ವಾಣಿಜ್ಯ ಮತ್ತು ಕೈಗಾರಿಗೆ ಇಲಾಖೆ. ಲೋಕೋಪಯೋಗಿ ಇಲಾಖೆ ಮತ್ತು ಮುಖ್ಯ ಇಂಜನಿಯರ್ ಸಂಪರ್ಕ ಮತ್ತು ಕಟ್ಟದ (ದಕ್ಷಿಣ) ಬೆಂಗಳೂರು ರವರುಗಳಿಗೆ ಮಾನ್ಯ ಲೋಕೋಪಯೋಗಿ ಸಚಿವರು ಸೂಚಿಸಿದರು. ಎಲ್ಲಾ ಇಲಾಖೆಯ ಅಧಿಕಾರಿಗಳು ಮಾಹಿತಿ/ವರದಿಯನ್ನು ನೀಡುವುದಾಗಿ ಸಭೆಗೆ ತಿಳಿಸಲಾಯಿತು.

**(ಕ್ರಮ: ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ/ ಕೆ.ಐ.ಎ.ಡಿ.ಬಿ/ಬಿಎಂಐಸಿಎಪಿಎ/ಲೋಕೋಪಯೋಗಿ ಇಲಾಖೆ/ ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡ ದಕ್ಷಿಣ)**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸಿ.ಸಿ.ಪಾಟೀಲ್)
ಮಾನ್ಯ ಲೋಕೋಪಯೋಗಿ ಸಚಿವರು

(ಆರ್.ಅಶೋಕ್)
ಮಾನ್ಯ ಕಂದಾಯ ಸಚಿವರು

(ಗೋವಿಂದ ಎಂ.ಕಾರಜೋಳ)
ಮಾನ್ಯ ಭಾರಿ ಮತ್ತು
ಮಧ್ಯಮ ನೀರಾವರಿ ಸಚಿವರು

(ಎಸ್.ಟಿ.ಸೋಮಶೇಖರ್)
ಮಾನ್ಯ ಸಹಕಾರ ಸಚಿವರು

## ನೈಸ್ ಯೋಜನೆಯ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಪರಿಶೀಲಿಸಿ ಸಚಿವ ಸಂಪುಟಕ್ಕೆ ಶಿಫಾರಸ್ಸುಗಳನ್ನು ಮಾಡಲು ರಚಿಸಲಾಗಿರುವ ಸಚಿವ ಸಂಪುಟ ಉಪ ಸಮಿತಿಯು ದಿನಾಂಕ:25.04.2022 ರಂದು ನಡೆಸಿದ ಸಭೆಯ ನಡವಳಿಗಳು

ಸಭೆಯಲ್ಲಿ ಉಪಸ್ಥಿತರಿದ್ದ ಸಚಿವ ಸಂಪುಟ ಉಪ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಮೊದಲಿಗೆ ಸರ್ಕಾರದ ಕಾರ್ಯದರ್ಶಿ, ಲೋಇ ಇವರು ಸಭೆಯಲ್ಲಿ ಉಪಸ್ಥಿತರಿದ್ದ ಸಚಿವ ಸಂಪುಟ ಉಪ ಸಮಿತಿಯ ಅಧ್ಯಕ್ಷರಾದ ಮಾನ್ಯ ಲೋಕೋಪಯೋಗಿ ಸಚಿವರನ್ನು ಹಾಗೂ ಕಂದಾಯ ಸಚಿವರು ಮತ್ತು ಸಹಕಾರ ಸಚಿವರು ಹಾಗೂ ಹಿರಿಯ ಅಧಿಕಾರಿಗಳನ್ನು ಸ್ವಾಗತಿಸಿದರು.

ಬಿಎಂಐಸಿ ಯೋಜನೆಗೆ ಸಂಬಂಧಿಸಿದಂತೆ ಸದರಿ ಸಭೆಯಲ್ಲಿ ಚರ್ಚಿಸಲು ಒಟ್ಟು 09 ವಿಷಯಗಳಿರುವುದಾಗಿ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ದಿನಾಂಕ:14.02.2022 ರಂದು ನಡೆದ ಸಚಿವ ಸಂಪುಟ ಉಪ ಸಮಿತಿಯಲ್ಲಿ ಚರ್ಚಿಸಿದಂತೆ, ಯೋಜನೆಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯಗಳಲ್ಲಿ ಬಾಕಿ ಇರುವಂತಹ ಒಟ್ಟು ಪ್ರಕರಣಗಳ ಸಂಖ್ಯೆ ಹಾಗೂ ಯೋಜನೆಗೆ ಸಂಬಂಧಿಸಿದಂತೆ ಸ್ವಾದೀನ ಪಡಿಸಿಕೊಳ್ಳಲಾದ ಒಟ್ಟಾರೆ ಎಷ್ಟು ಜಮೀನುಗಳ ವಿವರ, ಅದರಲ್ಲಿ ಎಷ್ಟು ಜಮೀನುಗಳಿಗೆ ಅವಾರ್ಡ್ ಆಗಿದೆ, ಎಷ್ಟು ಜಮೀನುಗಳಿಗೆ ಅವಾರ್ಡ್ ಆಗಿರುವುದಿಲ್ಲ ಎಂಬ ಬಗ್ಗೆ ಮಾಹಿತಿಯನ್ನು ಕ್ರೋಢಿಕರಿಸಿ ಸಲ್ಲಿಸಲು ಸೂಚಿಸಲಾಗಿತ್ತು, ಅದರಂತೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಕೆ.ಐ.ಎ.ಡಿ.ಬಿ.ಯಿಂದ ಮತ್ತು ಬಿ.ಎಂ.ಐ.ಸಿ.ಎ.ಪಿ.ಎ ರವರಿಂದ ಮಾಹಿತಿಗಳು ಸ್ವೀಕೃತವಾಗಿದ್ದು, ಈ ಎಲ್ಲಾ ಮಾಹಿತಿಗಳನ್ನು ಅಜೆಂಡಾ-1 ರಲ್ಲಿ ಸಲ್ಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಕಂದಾಯ ಸಚಿವರು ಮಾತನಾಡಿ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಸಚಿವ ಸಂಪುಟ ಉಪ ಸಮಿತಿಯು ಈ ಕೆಳಕಂಡ 03 ವಿಷಯಗಳ ಬಗ್ಗೆ ಸ್ಪಷ್ಟ ನಿಲುವನ್ನು ಕೈಗೊಳ್ಳುವ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು.